ಶ್ರೀ ಕೆ.ಎಸ್. ಈಶ್ವರಪ್ಪ :— ಬಸವರಾಜುರವರೇ, ಬಾವಿಯಿಂದ ಹೊರಗೆ ಬನ್ನಿ.

(ಧರಣಿ ಕುಳಿತಿದ್ದ ಶ್ರೀ ಹೆಚ್.ಡಿ. ಬಸವರಾಜುರವರು ಬಾವಿಯಿಂದ ಹೊರಗೆ ಬಂದು ತಮ್ಮ ಸ್ಥಾನದಲ್ಲಿ ಕುಳಿತರು)

ಮದ್ದೂರು ತಾಲ್ಲೂಕಿನ ಶಿಂಷಾ ನದಿಯ ತೀರದಲ್ಲಿ ಮರಳು ಸಾಗಿಸುತ್ತಿರುವುದು.

169(1326) ಡಾ: ಎಂ. ಮಹೇಶ್ ಚಂದ್ (ಮದ್ದೂರು) :— ಮಾನ್ಯ ಗಣಿ ಮತ್ತು ಭೂವಿಜ್ಞಾನ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕಿನ ಶಿಂಷಾ ನದಿಯ ತೀರದಲ್ಲಿ ಮರಳನ್ನು ವ್ಯಾಪಕವಾಗಿ ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಮರಳನ್ನು ಈ ರೀತಿ ತೆಗೆಯುತ್ತಿರುವುದರಿಂದ, ಈ ಪ್ರದೇಶದಲ್ಲಿ ಅಂತರ್ಜಲ ಬಳಕೆ ಕಡಿಮೆಯಾಗಿ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಮರಳನ್ನು ಸಾಗಿಸಲು ಪ್ರತಿನಿತ್ಯ 400 ರಿಂದ 500 ಲಾರಿಗಳು 20 ರಿಂದ 25 ಟನ್ ಮರಳನ್ನು ಒಂದೇ ಬಾರಿಗೆ ಸಾಗಿಸುತ್ತಿರುವುದರಿಂದ ರಸ್ತೆಗಳು ತುಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎ.ಬಿ. ಪಾಟೀಲ್ (ಗಣಿ ಮತ್ತು ಭೂವಿಜ್ಞಾನ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು) :—

ಅ) ಹೌದು.

ಆ) ಇಲ್ಲ

ಇ) ಇಲ್ಲ

ಈ) ಮದ್ದೂರು ತಾಲ್ಲೂಕಿನ ತಹಸೀಲ್ದಾರ್‌ರವರು ಈ ಸಮಸ್ಯೆಯನ್ನು ಗಣನೆಗೆ ತೆಗೆದುಕೊಂಡು ಹಾಗೂ ಸ್ಥಳೀಯ ಭೂವಿಜ್ಞಾನಿಯವರೊಂದಿಗೆ ಚರ್ಚಿಸಿದ ನಂತರ, ವೈದ್ಯನಾಥೇಶ್ವರ ದೇವಸ್ಥಾನದ ಬಳಿ ಶಿಂಷಾ ನದಿಯಿಂದ ಮರಳು ತೆಗೆಯುವುದನ್ನು ನಿಷೇಧಿಸಿ ಆದೇಶ ಹೊರಡಿಸಿದ್ದಾರೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಈ

ಪ್ರದೇಶದಲ್ಲಿ ಸಾಧಾರಣ ಮರಳು ತೆಗೆಯಲು ಗುತ್ತಿಗೆಗಳನ್ನು ನೀಡಿಲ್ಲದಿರುವುದಲ್ಲದೆ, ಇಲ್ಲಿ ನಡೆಯುವ ಅಕ್ರಮ ಗಣಿಗಾರಿಕೆ ಹಾಗೂ ಮರಳು ಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೂಡ ಕೈಗೊಂಡಿದೆ. ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಹಿರಿಯ ಅಧಿಕಾರಿಗಳ ಒಂದು ತಂಡವು ಈ ಸಮಸ್ಯೆಯ ಬಗ್ಗೆ ಅಮೂಲಾಗ್ರವಾಗಿ ಚರ್ಚೆ ನಡೆಸಿ, ಸಾಧಾರಣ ಮರಳಿನ ಅಕ್ರಮ ಗಣಿಗಾರಿಕೆ ಹಾಗೂ ಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯ ಯೋಜನೆಯನ್ನೂ ಸಹ ರೂಪಿಸಿದೆ. ಇದರಂತೆ, ಪ್ರಾರಂಭಿಕವಾಗಿ, ಸಾರ್ವಜನಿಕರಿಗೆ ಪತ್ರಿಕೆಗಳ ಪ್ರಕಟಣೆ ಮೂಲಕ ತಿಳುವಳಿಕೆ ನೀಡಲಾಗಿದೆಯಲ್ಲದೆ, ಅಕ್ರಮ ಮರಳು ಸಾಗಾಣಿಕೆಯ ತಪಾಸಣೆಗಾಗಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕೇಂದ್ರ ಕಛೇರಿಯಿಂದ ಒಂದು ಸ್ಕ್ವಾಡ್‌ನ್ನೂ ಈಗಾಗಲೇ ಕಳುಹಿಸಿದ್ದು, ಈ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ಆಗದಂತೆ ತಡೆಗಟ್ಟುವ ದಿಸೆಯಲ್ಲಿ ನಿಗಾ ಇಡಲೂ ಸಹ ಕ್ರಮ ಕೈಗೊಳ್ಳಲಾಗಿದೆ.

ಡಾ: ಎಂ. ಮಹೇಶ್ ಚಂದ್ :— ಮಾನ್ಯ ಅಧ್ಯಕ್ಷರೆ, ನನಗೆ ಕೊಟ್ಟಿರುವ ಉತ್ತರ ಸರಿಯಾಗಿಲ್ಲ ಮಾನ್ಯ ಮಂತ್ರಿಗಳು ಅಂತರ್ಜಲ ಬಳಕೆ ಮತ್ತು ಕುಡಿಯುವ ನೀರಿಗೆ ತೊಂದರೆಯಾಗಿಲ್ಲವೆಂದು ಮತ್ತು 20 ರಿಂದ 25 ಟನ್ ಮರಳನ್ನು ಲಾರಿಗಳಲ್ಲಿ ತೆಗೆದುಕೊಂಡು ಹೋಗುತ್ತಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ಪೋಲಿಸರು ಮತ್ತು ಆರ್.ಟಿ.ಓದವರು ಇರುವುದು ಏಕೆ? ಇವರುಗಳು ಎಲ್ಲಾ ಲಾರಿಗಳನ್ನು ಚೆಕ್ ಮಾಡಿಕೊಂಡು ವೇ-ಬ್ರಿಡ್ಜ್‌ಗೆ ತೆಗೆದುಕೊಂಡು ಹೋದಾಗ ವೇ-ಬ್ರಿಡ್ಜ್‌ನವರು ಬಾಯಿ ಬಡಿದುಕೊಂಡುಬಿಟ್ಟಿದ್ದಾರೆ. ಏಕೆಂದರೆ ವೇ-ಬ್ರಿಡ್ಜ್ ಕೆಪ್ಯಾಸಿಟಿ ಇರುವುದೇ 25 ಟನ್. ಆದರೆ ಈ ಲಾರಿ ಅದಕ್ಕಿಂತಲೂ ಹೆಚ್ಚಿತ್ತು. ನಾನು ಪ್ರಶ್ನೆಯಲ್ಲಿ ಇಷ್ಟು ಹೆಚ್ಚು ಟನ್ ಹೊತ್ತ ಲಾರಿಗಳು ರಸ್ತೆಗಳಲ್ಲಿ ಓಡಾಡುವುದರಿಂದ ರಸ್ತೆಗಳು ಕೆಟ್ಟಿಲ್ಲವೇ ಎಂದು ಕೇಳಿದರೆ ಮಾನ್ಯ ಮಂತ್ರಿಗಳು ಕೆಟ್ಟಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ತಾಲ್ಲೂಕು ರಸ್ತೆಗಳಲ್ಲಿ ಸುಮಾರು ಎಂಟತ್ತು ಕೋಟಿ ರೂ.ಗಳ ರಸ್ತೆಗಳು ಕೆಟ್ಟು ನಷ್ಟವಾಗಿದೆ. ನಮ್ಮ ತಂದೆಯವರು ಶಾಸಕರಾಗಿದ್ದಾಗ ಐದಾರು ಸ್ಕೀಮ್ಸ್‌ಗಳನ್ನು ಮಾಡಿ ಕಾರ್ಯರೂಪಕ್ಕೆ ತಂದಿದ್ದೆವು. ಆದರೆ ಇವೊತ್ತು ಅದೆಲ್ಲಾ ಕ್ಲೋಸ್ ಆಗಿದೆ. ಇನ್ನು ಭಾರಿ ನೀರಾವರಿ ಸಚಿವರು ಸುಮಾರು ಮುರ್ನಾಲ್ಕು ಕೋಟಿ ರೂ.ಗಳನ್ನು ಕೊಟ್ಟು ಸುಮಾರು 12 ಲಿಫ್ಟ್ ಇರಿಗೇಷನ್ ಸ್ಕೀಮ್ಸ್‌ಗಳನ್ನು ನಡೆಸುತ್ತಿದ್ದಾರೆ. ಇದರಿಂದ ಯಾರಿಗೆ ನಷ್ಟ ನೀವೇ ಹೇಳಿ. ಸರ್ಕಾರದ ಹಣ ಸರಿಯಾಗಿ ಉಪಯೋಗವಾಗದಿದ್ದರೆ ರೈತರಿಗೆ ತೊಂದರೆಯಾಗುತ್ತದೆಯಾದ ಕಾರಣ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕು.

ಶ್ರೀ ಎ.ಬಿ.ಪಾಟೀಲ್ :—ಮಾನ್ಯ ಅಧ್ಯಕ್ಷರೇ, ಮದ್ದೂರು ತಾಲ್ಲೂಕಿನ ಶಿಂಷಾ ನದಿ ತೀರದಲ್ಲಿ ನಮ್ಮ ಇಲಾಖೆಯಿಂದ ಯಾವುದೇ ಗುತ್ತಿಗೆಯನ್ನು ನೀಡಿಲ್ಲ. ಅಲ್ಲಿ ಮರಳನ್ನು ಲಾರಿಗಳಲ್ಲಿ ತೆಗೆದುಕೊಂಡು ಹೋಗುತ್ತಿರುವ ವಿಷಯ ಗಮನಕ್ಕೆ ಬಂದತೂಡಲೇ ದಿನಾಂಕ: 19-2-99ರಲ್ಲಿ ಜಿಲ್ಲಾಧಿಕಾರಿಗಳು ಪೋಲಿಸ್ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದಾರೆ

ಮತ್ತು ಡಿಸೆಂಬರ್ 98ರಲ್ಲಿಯೂ ಕೂಡ ಸಭೆ ನಡೆಸಿ ಕಟ್ಟುನಿಟ್ಟಿನ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಇನ್ನೂ ರಸ್ತೆಗಳ ಬಗ್ಗೆ ಸದಸ್ಯರು ಮಾತನಾಡಿ ಅಲ್ಲಿ ರಸ್ತೆಗಳು ಕೆಡುತ್ತಿವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಲೋಕೋಪಯೋಗಿ ಇಲಾಖೆಗೆ ರಿಪೇರಿ ಮಾಡುವ ಬಗ್ಗೆ ತಿಳಿಸುತ್ತೇವೆ. ಆದರೆ ವ್ಯಾಪಕವಾಗಿ ಮರಳನ್ನು ಸಾಗಿಸುವುದನ್ನು ಸಂಪೂರ್ಣವಾಗಿ ಬಂದ್ ಮಾಡಬೇಕಾದರೆ ನಮ್ಮ ಇಲಾಖೆಗೆ ಇರುವ ಒಂದೇ ಒಂದು ಅಧಿಕಾರವೆಂದರೆ ಪವರ್ ಡೆಲಿಗೇಟ್ ಮಾಡುವುದು. ಹೆಚ್ಚಿಗೆ ನೌಕರಿಗಳನ್ನು ತುಂಬಿಕೊಳ್ಳಲು ಸರ್ಕಾರ ಕ್ರಮ ಕೈಗೊಂಡಿದೆ. ಇದಲ್ಲದೇ ತಹಸೀಲ್ದಾರ್‌ರವರು ಮತ್ತು ಪೋಲಿಸ್ ಅಧಿಕಾರಿಗಳೂ ಕೂಡ ಕಟ್ಟುನಿಟ್ಟಿನ ಕ್ರಮಗಳನ್ನು ತೆಗದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಸರಿಯಾಗಿ ರಾಯಲ್ಟಿ ಕೂಡ ಬರಲಿಲ್ಲವೆನ್ನು ಉದ್ದೇಶ ಕೆಲವರಿಗೆ ಇತ್ತು. ಇವ್ಹೊತ್ತು ಗ್ರಾಮ ಪಂಚಾಯತಿಗಳಿಗೆ ಮತ್ತು ತಾಲ್ಲೂಕು ಸಂಸ್ಥೆಗಳಿಗೆ ಸರಿಯಾದ ರೀತಿಯಲ್ಲಿ ಆದಾಯ ಹೋಗಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಅದಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿಯನ್ನು ತರುತ್ತಿದೆ. ಮರಳು ಎತ್ತುತ್ತಿರುವ ಸಮಸ್ಯೆ ಇಡೀ ರಾಜ್ಯದಲ್ಲಿ ಇರುವ ಸಮಸ್ಯೆಯಾಗಿದೆ. ಇದನ್ನು ಕಂಟ್ರೋಲ್ ಮಾಡಲು ಬಹಳ ಕಷ್ಟದಾಯಕವಾಗುತ್ತಿದೆ. ಆದುದರಿಂದ ತಾಲ್ಲೂಕು ಸಂಸ್ಥೆಗಳಿಗೆ ಜವಾಬ್ದಾರಿ ಕೊಟ್ಟರೆ ಕಂಟ್ರೋಲ್ ಆಗುವುದಲ್ಲದೆ ಅವರಿಗೆ ಆದಾಯ ಕೂಡ ಸಿಗುತ್ತದೆಯಾದ್ದರಿಂದ ತಿದ್ದುಪಡಿಯನ್ನು ತಂದು ಜಾರಿಗೊಳಿಸುತ್ತೇವೆ. ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಡಾ: ಎಂ. ಮಹೇಶ್‌ಚಂದ್ :— ಮಾನ್ಯ ಅಧ್ಯಕ್ಷರೆ, 1996-97 ರಲ್ಲಿಯೇ ಸಣ್ಣ ನೀರಾವರಿ ಇಲಾಖೆಯವರು ಜಿಲ್ಲಾಧಿಕಾರಿಗಳಿಗೆ ತಿಳಿಸಿ ಲಿಫ್ಟ್ ಇರಿಗೇಷನ್ ಸ್ಥಗಿತಗೊಂಡಿರುವ ಬಗ್ಗೆ ಮತ್ತು ಇದರಿಂದಾಗಿ ರೈತರಿಗೆ ನೀರನ್ನು ಕೊಡಲು ಬಹಳ ತೊಂದರೆಯಾಗಿದೆಯೆಂದು ತಿಳಿಸಿದ್ದಾರೆ. ಆದರೆ ಜಿಲ್ಲಾಧಿಕಾರಿಗಳುಮಂತ್ರಿಗಳಿಗೆ ಸರಿಯಾದ ಉತ್ತರವನ್ನು ಒದಗಿಸಿಲ್ಲ. ನಮ್ಮ ಕಡೆ ರಸ್ತೆಗಳು ಹಾಳಾಗಿದೆ, ಹೀಗಿರುವಾಗ ಅವುಗಳ ಬಗ್ಗೆ ನಾವು ಇನ್ಯಾರ ಬಳಿ ಉತ್ತರ ಪಡೆಯಬೇಕು? ರಸ್ತೆಗಳು ಅವರ ಡಿಪಾರ್ಟ್‌ಮೆಂಟ್‌ಗೆ ಬರುವುದಿಲ್ಲವೆನ್ನುತ್ತಾರೆ.

ಶ್ರೀ ಎ.ಬಿ. ಪಾಟೀಲ್ :— ಜಿಲ್ಲಾಧಿಕಾರಿಗಳು ಈ ರೀತಿ ಅಲ್ಲಿ ನಡೆದಿದೆ ಎಂದು ಹೇಳಿ ವರದಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅವರಿಗೂ ಕೂಡ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ನಿರ್ದೇಶನವನ್ನು ಕೊಟ್ಟಿದ್ದೇವೆ. ಆದರೆ ಪ್ರಾಕ್ಟಿಕಲ್ ರೀತಿಯಲ್ಲಿ ಗ್ರಾಮಸ್ಥರು ಮುಖ್ಯವಾಗಿ ಸಹಕಾರ ಕೊಡಬೇಕಾಗುತ್ತದೆ. ಊರಿನವರೇ ಮರಳನ್ನು ಒಂದು ಕಡೆಗೆ ಒಯ್ಯುತ್ತಿರುತ್ತಾರೆ. ಆದಕಾರಣ ಯಾವುದೇ ಸರ್ಕಾರಕ್ಕಾದರೂ ಇದನ್ನು ಕಂಟ್ರೋಲ್ ಮಾಡಬೇಕಾದರೆ ಮುಖ್ಯವಾಗಿ ಗ್ರಾಮಸ್ಥರು ಸಹಕಾರ ಕೊಡಬೇಕಾಗುತ್ತದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಡಿವಿಶನ್‌ನ್ನು ಎಲ್ಲ ಕಡೆ ಕೊಡದೇ ಇದ್ದರೂ ಕೂಡ ಇದನ್ನು ಕಂಟ್ರೋಲ್ ಮಾಡಲು ಗ್ರಾಮ ಪಂಚಾಯಿತಿಗೆ ಕೊಟ್ಟರೆ ಅವರದ್ದೂ ಕೂಡ ಆದಾಯ ಹೆಚ್ಚುತ್ತದೆ ಎನ್ನುವ ಉದ್ದೇಶದಿಂದ ತಿದ್ದುಪಡಿಯನ್ನು ತರಲು ಬಯಸಿದ್ದೇವೆ.

ಡಾ: ಎಂ. ಮಹೇಶ್‌ಚಂದ್ :— ಅಧ್ಯಕ್ಷರೆ, ಒಟ್ಟು 42 ಗ್ರಾಮ ಪಂಚಾಯತಿಗಳು ನಮ್ಮ ಮದ್ದೂರು ತಾಲ್ಲೂಕಿನಲ್ಲಿ ಬರುತ್ತವೆ. ಈ ಎಲ್ಲಾ 42 ಗ್ರಾಮ ಪಂಚಾಯತಿಗಳಲ್ಲೂ ನಾವು ಅನ್-ಆಫಿಶಿಯಲ್ ರೀತಿಯಲ್ಲಿ ಚೆಕ್ ಪೋಸ್ಟ್‌ಗಳನ್ನು ಹಾಕಿದ್ದೇವೆ. ಈ ಚೆಕ್ ಪೋಸ್ಟ್‌ಗಳಿಂದ ಗ್ರಾಮ ಪಂಚಾಯಿತಿಗಳವರು ಸುಮಾರು 10 ರಿಂದ 12 ಲಕ್ಷದವರೆಗೆ ತಿಂಗಳಿಗೆ ಹಣವನ್ನು ಕಲೆಕ್ಟ್ ಮಾಡಿದ್ದಾರೆ. ಮಂಡ್ಯದ ಚೀಫ್ ಎಕ್ಸಿಕ್ಯುಟಿವ್ ಆಫೀಸರ್‌ರವರು ಕಲೆಕ್ಟ್ ಮಾಡಿದ್ದಾರೆ. ಈ ಹಣದಲ್ಲಿ ಒಂದು ರೂ.ವನ್ನು ಕೂಡ ರಸ್ತೆಯಲ್ಲಿ ಗುಂಡಿ ಮುಚ್ಚುವ ಕೆಲಸಕ್ಕೆ ಖರ್ಚು ಮಾಡಿಲ್ಲ. ಇದರಿಂದಾಗಿ ರಸ್ತೆ ರಿಪೇರಿ ಕೆಲಸವಾಗಿಲ್ಲ. ಗ್ರಾಮಸ್ಥರು ಮರಳು ಸಾಗಿಸುವುದರಲ್ಲಿ ಕಂಟ್ರೋಲ್ ಮಾಡಲು ಸಹಕರಿಸಬೇಕು ಎನ್ನುತ್ತಾರೆ. ಈ ರೀತಿಯಲ್ಲಿ ಮಾಡಲು ಹೋದಾಗ ಊರಿನಲ್ಲಿ ಗಲಭೆಯಾಗಿ ಪೋಲಿಸರು ಸರಿಯಾಗಿ ಗ್ರಾಮಸ್ಥರಿಗೆ ರಕ್ಷಣೆ ಕೊಡುವುದಕ್ಕೆ ಆಗುತ್ತಿಲ್ಲವಾಗಿದೆ. ನಮ್ಮ ಮಂಡ್ಯದ ಜಿಲ್ಲಾಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ಅವರನ್ನು ಮುಖ್ಯಮಂತ್ರಿಗಳು ಸಸ್ಪೆಂಡ್ ಮಾಡಬೇಕು.

ಶ್ರೀ ಎ.ಬಿ. ಪಾಟೀಲ್ :— ಯಾವುದೇ ಅಧಿಕಾರಿಗಳು ತಪ್ಪು ಮಾಡಿದರೂ ಕೂಡ ಅವರ ಮೇಲೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

ಡಾ: ಎಂ.ಪಿ. ಕರ್ಕಿ :— ಅಧ್ಯಕ್ಷರೆ, ನಮ್ಮ ಕಡೆಯಲ್ಲಿ ಮರಳು ಮತ್ತು ಚಿಪ್ಪಿಗಳನ್ನು ಕಳ್ಳತನದಲ್ಲಿ ಸಾಗಾಣಿಕೆ ಮಾಡುತ್ತಿದ್ದಾರೆ. ಇದನ್ನು ಗಣಿಗಾರಿಕೆ ಮತ್ತು ಭೂ ವಿಜ್ಞಾನ ಇಲಾಖೆಯವರೇ ಕಂಟ್ರೋಲ್ ಮಾಡಬೇಕು. ಮಾನ್ಯ ಮಂತ್ರಿಗಳು ತಹಸೀಲ್ದಾರ್‌ರವರನ್ನು ಮತ್ತು ಪೋಲಿಸ್‌ರವರನ್ನು ಡೆಲಿಗೇಟ್ ಮಾಡಲಾಗಿದೆಯೆಂದು ಹೇಳುತ್ತಿದ್ದಾರೆ. ನಮ್ಮ ಕಡೆ ಆ ಡೆಲಿಗೇಷನ್ ಇನ್ನೂ ಆಸ್ತಿತ್ವಕ್ಕೆ ಬಂದಿಲ್ಲ. ಯಾವ ಆದೇಶದ ಪ್ರಕಾರ ಡೆಲಿಗೇಟ್ ಮಾಡಲಾಗಿದೆಯೆಂಬುದನ್ನು ನನಗೆ ಹೇಳಿದರೆ ನಾನು ನಮ್ಮ ಕಡೆಯ ತಹಸೀಲ್ದಾರ್‌ರವರಿಗೆ ಮತ್ತು ಪೋಲಿಸ್‌ರವರಿಗೆ ಹೇಳಲು ಅನುಕೂಲವಾಗುತ್ತದೆ. ಯಾವಾಗಲಿಂದ ಮಾಡಲಾಗಿದೆಯೆಂಬುದನ್ನು ಹೇಳಬೇಕು.

ಶ್ರೀ ಎ.ಬಿ. ಪಾಟೀಲ್ :— ಯಾವ ನೋಟಿಫಿಕೇಷನ್ ಮೂಲಕ ಮಾಡಲಾಗಿದೆ ಎಂಬುದಕ್ಕೆ ಸಂಬಂಧಪಟ್ಟಂತೆ ಅದರ ನಕಲನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರ ಕೊಡುವಾಗ ಯಾವುದೇ ಕಡೆಯಲ್ಲೂ ಕೂಡ ಗುತ್ತಿಗೆಯನ್ನು ಕೊಟ್ಟಿಲ್ಲವೆಂದಿದ್ದಾರೆ. ಬೆಂಗಳೂರು ಸುತ್ತಮುತ್ತ ಮತ್ತು ನನ್ನ ಕ್ಷೇತ್ರವಾದ ಕಳ್ಳಂಬೆಳ್ಳ ಮತ್ತು ಕೊರಟಗೆರೆಯ ಭಾಗಗಳಲ್ಲಿ ಇದೇ ಪ್ರಮಾಣದ ತೊಂದರೆ ಇದೆ. ಮರಳನ್ನು ನಿರಂತರವಾಗಿ ತೆಗೆಯುತ್ತಿರುವುದರಿಂದ ಅಲ್ಲಿರತಕ್ಕಂಥ

ಮರಳೆಲ್ಲಾ ಹೋಗಿ ಎಲ್ಲಾ ಪಂಪ್‌ಸೆಟ್‌ಗಳೂ ಕೂಡ ನಿಂತುಹೋಗಿ ಅಲ್ಲಿರತಕ್ಕಂಥ ತೋಟಗಳೆಲ್ಲಾ ಒಣಗುವ ಪರಿಸ್ಥಿತಿಗೆ ಬಂದಿದೆ. ಇದಕ್ಕಾಗಿ ಸಾಕಷ್ಟು ಪ್ರತಿಭಟನೆಗಳು ಬಂದಿರುವುದು ತಮಗೂ ಕೂಡ ಗೊತ್ತಿರುವಂಥದ್ದೆ. ಮಂತ್ರಿಗಳು ಹೇಳಿದರು, ನಾವು ಯಾವುದೇ ಲೀಸ್ ನ್ನು ಕೊಟ್ಟಿಲ್ಲ, ಆದರೂ ಕೂಡ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು.

11.10 ಎ.ಎಂ.

ತಮ್ಮಲ್ಲಿ ಒಂದು ತಪ್ಪಿದೆ ಮಾನ್ಯ ಅಧ್ಯಕ್ಷರ ಆಪ್ಷಣೆ ಪಡೆದು ನಾನು ಕೇಳುತ್ತಿದ್ದೇನೆ. ಲಾರಿಯವರ ಸ್ಟ್ರೈಕ್‌ಗೆ ಬೆಲೆಯಾಗಿ ಒಂದು ಪರ್ಮಿಟ್‌ಅನ್ನು ಇಶ್ಯೂ ಮಾಡುತ್ತಿದ್ದೀರಿ. ಒಂದು ಬಾರಿ ಒಂದು ಸಾವಿರ ರೂಪಾಯಿ ಕೊಟ್ಟು ಒಂದು ಪರ್ಮಿಟ್ ಕೊಟ್ಟರೆ ಮೂರು ತಿಂಗಳವರೆಗೂ ಅವರು ಎಲ್ಲಿ ಬೇಕಾದರೂ ಕೂಡ ಮರಳನ್ನು ನಿರಂತರವಾಗಿ ತೆಗೆದುಕೊಂಡು ಹೋಗಬಹುದು. ರಾಯಲ್ಟಿ ಕೊಟ್ಟಿದ್ದಾನಾ, ಬಿಟ್ಟಿದ್ದಾನಾ ಗೊತ್ತಿಲ್ಲ. ಎಷ್ಟು ಕೊಡುತ್ತಿದ್ದಾರೆ ಎಂಬುದೂ ಗೊತ್ತಿಲ್ಲ. On the contrary, the Deputy Commissioner cannot take any action. ಅವರ ಮೇಲೆ ಏಕೆ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ? ನೀವು ಎಲ್ಲಿಯವರೆಗೆ ಈ ಸಿಸ್ಟಂ ಅನ್ನು ವಿತ್‌ಡ್ರಾ ಮಾಡುವುದಿಲ್ಲ, ಅಲ್ಲಿಯವರೆಗೆ ಯಾವ ಜಿಲ್ಲಾಧಿಕಾರಿಗಳೂ, ಕೂಡ ನಮ್ಮ ನೆರವಿಗೆ ಬರುವುದಿಲ್ಲ. ಇವತ್ತು ಮರಳು ಸಾಗಣೆ ಆಗತಕ್ಕಂಥಾದ್ದು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ಅದರ ಬಗ್ಗೆ ಪರಿಶೀಲನೆ ಮಾಡಿ.

ಶ್ರೀ ಎ.ಬಿ. ಪಾಟೀಲ್ :—ಮಾನ್ಯ ಜಯಚಂದ್ರ ಅವರು ಒಂದು ಪ್ರಶ್ನೆ ಕೇಳಿದರು. ಯಾವುದೇ ಗುತ್ತಿಗೆಯನ್ನು ನಾವು ಅಲ್ಲಿ ಕೊಟ್ಟಿಲ್ಲ. ಮದ್ದೂರು ತಾಲ್ಲೂಕಿನ ಶಿಂಷಾ ನದಿ ದಡದಲ್ಲಿ ಯಾವುದೇ ಲೀಸ್ ಕೊಟ್ಟಿಲ್ಲ. ಬೆಂಗಳೂರು ಸುತ್ತಮುತ್ತ ಎಂದು ಹೇಳಿಲ್ಲ. ನಾನು ಇಲ್ಲೂ ಕೂಡ ಇವತ್ತು ಈ ರೀತಿಯಾಗಿದೆ. ಅದಕ್ಕೋಸ್ಕರ ಇವತ್ತು ಸಮಗ್ರ ತಿದ್ದುಪಡಿಯನ್ನು ತರಬೇಕೆಂದು ಇರುವುದು. ಇವತ್ತು ಇಲಾಖೆಗಳ್ಲದೆ, ಎಲ್ಲರಿಗೂ ಕೂಡ ಗೊತ್ತಿದೆ. ಒಂದು ಪರ್ಮಿಟ್ ಮೇಲೆ ಸುಮಾರು ಲಾರಿಯನ್ನು ತಿಂಗಳುಗಟ್ಟಲೆ ಓಡಿಸುತ್ತಾರೆ. ಅದಕ್ಕೆ ನಾನು ಬದಲಾವಣೆ ತರುತ್ತಿದ್ದೇನೆ. ಕಾನೂನು ಬದಲಾವಣೆ ಮಾಡುತ್ತಿದ್ದೇವೆ ಎಂದು ತಿಳಿಸುತ್ತಿದ್ದೇನೆ.

ಶ್ರೀಮತಿ ಎನ್. ಜ್ಯೋತಿ ರೆಡ್ಡಿ :— ಮಾನ್ಯ ಅಧ್ಯಕ್ಷರೇ, ಮರಳು ಸಾಗಾಣಿಕೆ ವಿಚಾರದಲ್ಲಿ ಗೌರಿಬಿದನೂರು ಪಿನಾಕಿನ ನದಿಯಿಂದ ಇದೇ ತರಹ ಮರಳು ಅಲ್ಲಿ ಹೋಗುತ್ತಿದೆ. ಮರಳು ಸಾಗಾಣಿಕೆಯಲ್ಲಿ ಅದು ಕ್ರೈಮ್ ಎಂದು ಯಾರಿಗೂ ಅಕೌಂಟಬಿಲಿಟಿ ಇಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ ಒಂದು ಲಾರಿಗೆ ಒಂದು ಸಾವಿರ ರೂಪಾಯಿ ಕೊಟ್ಟು ಪರ್ಮಿಟ್ ಎಂದು ತೆಗೆದುಕೊಂಡು ಅವರು ಸಾವಿರಾರು ಲಾರಿ ಲೋಡ್

ಮರಳು ಸಾಗಣೆ ಮಾಡುತ್ತಾರೆ. ಒಂದು ವೇಳೆ ಪೊಲೀಸರು ಅವರನ್ನು ಹಿಡಿದುಕೊಂಡು ಮುರ್ನಾಲ್ಕು ಸಾವಿರ ರೂಪಾಯಿ ಫೈನ್ ಹಾಕಿದರೂ ಕೂಡ ಅವರಿಗೆ ಕಷ್ಟ ಎಂದು ಏನೂ ಅನ್ನಿಸುವುದೇ ಇಲ್ಲ. ಅವರು ತುಂಬಾ ಸುಲಭವಾಗಿ 3-4 ಸಾವಿರ ರೂಪಾಯಿ ದಂಡ ಕಟ್ಟಿ ಮತ್ತೆ ಅದೇ ಕೆಲಸ ಮಾಡುತ್ತಿದ್ದಾರೆ. ಇದರಿಂದ ಸುಮಾರು ಕಡೆ ಪಿನಾಕಿನಿ ನದಿಯಲ್ಲಿ ಮರಳು ತೆಗೆದು, ಅಲ್ಲಿ ಸೇತುವೆಗಳು ಏನಿವೆ, ಗೌರಿಬಿದನೂರಿನಿಂದ ಚಿಕ್ಕಬಳ್ಳಾಪುರಕ್ಕೆ ಹೋಗುವ ಕಡೆ ಒಂದು ಸೇತುವೆ ಹಾಗೂ ಮಂಚೇನಹಳ್ಳಿ ತೊಂಡೇಭಾವಿ ಹತ್ತಿರ ಒಂದು ಸೇತುವೆ ಏನಿವೆ ಅವು ಹಾನಿಯಾಗಿವೆ. erosion of sand ಹೋಗುವುದರಿಂದ ಸೇತುವೆಗಳು ಹಾಳಾಗುತ್ತಿವೆ. ಆದುದರಿಂದ ನಾವು ಪಿಡಬ್ಲ್ಯೂಡಿ ಇಲಾಖೆಯಿಂದ ದುಡ್ಡು ತೆಗೆದುಕೊಂಡು ಸೇತುವೆಗಳನ್ನು ರಿಪೇರಿ ಮಾಡಿಸುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿಯಲ್ಲಿ ಇದ್ದೇವೆ. ಅದಕ್ಕೋಸ್ಕರ ತುಂಬಾ ಕಠಿಣವಾಗಿ ಮರಳು ಸಾಗಾಣಿಕೆಯನ್ನು ನಿಲ್ಲಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ಕೇಳುಕೊಳ್ಳುತ್ತೇನೆ.

ಶ್ರೀ ಆರ್.ಜಿ. ವೆಂಕಟಾಚಲಯ್ಯ :— ಮಾನ್ಯ ಅಧ್ಯಕ್ಷರೇ, ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಇದೇ ಪರಿಸ್ಥಿತಿ ಇದೆ. ಯಾರೂ ಬೇಕಾದರೂ ದುಡ್ಡು ಮಾಡಬಹುದು. ಪಂಚಾಯತ್‌ನವರು ಆನ್-ಆಫಿಶಿಯಲ್ ಆಗಿ ದುಡ್ಡು ಮಾಡುತ್ತಿದ್ದಾರೆ. ಊರಿನವರೂ ಕೂಡ ದೇವಸ್ಥಾನ ಕಟ್ಟಬೇಕು, ಅದು ಮಾಡುತ್ತೇವೆ, ಇದು ಮಾಡುತ್ತೇವೆಂದು ದುಡ್ಡು ಮಾಡುತ್ತಿದ್ದಾರೆ. ತಹಸೀಲ್ದಾರ್ ಬಂದರೂ ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ, ಪೊಲೀಸರು ಕೂಡ ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ. ಸರ್ಕಾರ ಏನೋ ಒಂದು ನೀತಿ ಮಾಡಿ ಲೈಸೆನ್ಸ್ ಕೊಟ್ಟು ಎಲ್ಲಿ ಇದರಿಂದ ತೊಂದರೆಯಾಗುವುದಿಲ್ಲ, ಅಂತಹ ಕಡೆ ಕೂಡ ಮರಳು ಹೊಡೆಯುವಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಯಾರೂ ಹೇಳುವವರು ಕೇಳುವವರು ಇಲ್ಲ. ಯಾರೂ ಬೇಕಾದರೂ ದುಡ್ಡು ಮಾಡಬಹುದು. ಚುನಾಯಿತ ಪ್ರತಿನಿಧಿಗಳೂ ದುಡ್ಡ ಮಾಡುತ್ತಿದ್ದಾರೆ. ಊರಿನವರು ದುಡ್ಡು ಮಾಡುತ್ತಿದ್ದಾರೆ, ಇಲಾಖೆಯವರು ದುಡ್ಡು ಮಾಡುತ್ತಿದ್ದಾರೆ. ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಂಡು ಏನಾದರೂ ತಿದ್ದುಪಡಿ ಮಾಡಿ ಒಂದು ಕಾನೂನು ಮಾರ್ಪಾಡು ಮಾಡದೇ ಹೋದರೆ ಅಲ್ಲಿ ಮರಳೂ ಹೋಗುತ್ತದೆ ಹಾಗೂ ಯಾರೂ ಬೇಕಾದರೂ ಕೂಡ ದುಡ್ಡು ಮಾಡುವುದಕ್ಕೆ ಅವಕಾಶವಾಗುತ್ತದೆ.

ಡಾ: ಎಂ. ಮಹೇಶ್‌ಚಂದ್ :— ಮಾನ್ಯ ಅಧ್ಯಕ್ಷರೇ, ಎಲ್ಲಾ ಶಾಸಕರುಗಳು ಸಹ ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿದ್ದಾರೆ. ಈಗ ನಮಗೆ ತಾವು ರಕ್ಷಣೆ ಕೊಡಬೇಕು. ಈಗ ಶಿಂಷಾ ತೀರದಲ್ಲಿ ಲೀಸ್ ಕೊಟ್ಟಿರುವುದನ್ನು ಕ್ಯಾನ್ಸಲ್ ಮಾಡಿ ಬ್ಯಾನ್ ಮಾಡಬೇಕು ಹಾಗೂ ಸರ್ಕಾರದಿಂದ ಒಂದು ಆಜ್ಞೆಯನ್ನು ತೆಗೆದುಕೊಂಡು ಬನ್ನಿ ಎಂದು ಮಾನ್ಯ ಮಂತ್ರಿಗಳು ಕಳೆದ ಮೂರು ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದೇವೆ. ಇದುವರೆಗೂ ಕೂಡ ಅವರು ತಂದಿಲ್ಲ. ಈಗಲೂ ಸಹ ಮಾನ್ಯ ಮಂತ್ರಿಯವರನ್ನು ಒಂದು

ತಿಂಗಳಿನಿಂದ ನಾನು ಕೇಳಿಕೊಳ್ಳುತ್ತಿದ್ದೇನೆ. ತಾವು ದಯವಿಟ್ಟು ಒಂದು ಸರ್ಕಾರಿ ಆಜ್ಞೆಯನ್ನು ತನ್ನಿ. ಶಿಂಷಾ ಬೆಡ್‌ನಲ್ಲಿ ಯಾವುದೇ ರೀತಿಯಿಂದ ಮರಳು ಸಾಗಾಣಿಕೆಗೆ ಅವಕಾಶ ಕೊಡುವುದಿಲ್ಲವೆಂದು ತನ್ನಿ ಎಂದು ಕೇಳುತ್ತಿದ್ದೇನೆ. ಅದಕ್ಕೆ ಸಮಗ್ರ ಉತ್ತರ ಇದಕ್ಕೆ ಬಂದಿಲ್ಲ. ಅದಕ್ಕೋಸ್ಕರ ತಾವು ರಕ್ಷಣೆಗೆ ಬಂದು ಸಹಾಯ ಮಾಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಹಾಗೂ ತಾವು ಯೋಚನೆ ಮಾಡಿದರೆ ಬಹಳ ಒಳ್ಳೆಯದು. ಇದು ಏನಾಗಿದೆಯೆಂದರೆ ಇಡೀ ರಾಜ್ಯದಾದ್ಯಂತ ಸಮಸ್ಯೆ ಇದೆ. ಪ್ರಾಕೃತ್ತಿಕ ಸಂಪತ್ತು ಪಂಚಾಯತ್ ಸ್ವತ್ತು ಎಂದು ಮಾಡಿ, ಅದಕ್ಕೆ ಕೆಲವು ನಾರ್ಮ್ಸ್ ಫಿಕ್ಸ್ ಮಾಡಿದರೆ ಈ ಸಮಸ್ಯ ಬಗೆಹರಿಸಬಹುದು. ಸರ್ಕಾರ ಆ ದಿಕ್ಕಿನಲ್ಲಿ ಯೋಚನೆ ಮಾಡಿದರೆ ಬಹಳ ಅನುಕೂಲವಾಗಿತ್ತದೆ, ಇಲ್ಲದೆ ಇದ್ದರೆ ಕಂಟ್ರಾಕ್ಟರ್ಸ್, ಮಧ್ಯವರ್ತಿಗಳು ಮನಸೋ ಇಚ್ಛೆ ಕಾರ್ಯಕ್ರಮ ರೂಪಿಸುತ್ತಾರೆ. ಗ್ರಾನೇಟ್ ಬಿಟ್ಟು ಬಾಕಿ ಎಲ್ಲಾ ಪ್ರಾಕೃತ್ತಿಕ ಸಂಪತ್ತು ಪಂಚಾಯತ್ ಸ್ವತ್ತು ಎಂದು ತೀರ್ಮಾನವನ್ನು ಮಾಡಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೇ, ಇದು ಬಹಳ ಉತ್ತಮವಾದ ಸಲಹೆ. ಈ ವಿಚಾರ ಬಹಳ ವರ್ಷಗಳಿಂದಲೂ ಚರ್ಚೆಗೆ ಒಳಗಾಗಿದೆ. ಪೊಲೀಸ್, ಕಂದಾಯ ಹಾಗೂ ಅರಣ್ಯ ಉಪ ಉತ್ಪಾದನೆಗಳು ಪ್ರಾಕೃತ್ತಿಕ ಸಂಪತ್ತಿನ ಕೆಲವು ಅಂಶಗಳು, ಮೈನರ್ ಅಂಡ್ ಮಿನರಲ್ಸ್ ಸಂಬಂಧಪಟ್ಟಿರತಕ್ಕಂಥಾದ್ದು ಕೂಡ ಪಂಚಾಯತ್ ರಾಜ್ ವ್ಯವಸ್ಥೆಗೆ ವಹಿಸಿಕೊಡಬೇಕೆಂದು ಇದೆ. ಬಹುಶಃ ಎಲ್ಲರೂ ಈ ಒಂದು ಅಭಿಪ್ರಾಯವನ್ನು ಮೂಡಿಸಿದರೆ ಸಾಧ್ಯವಾಗಬಹುದು ಎಂದು ಭಾವಿಸುತ್ತೇನೆ.

ಶ್ರೀ ಎ.ಬಿ. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಶ್ರೀಮತಿ ಜ್ಯೋತಿ ರೆಡ್ಡಿಯವರು ಹೇಳಿದ ಹಾಗೆ ಅಂತರ್ಜಲ ಬಹಳ ಕಡಿಮೆಯಾಗಿರುವುದರಿಂದ ಕೆಲವು ಕಟ್ಟಡಗಳು ಇದರಿಂದ ಹಾನಿಯಾಗುವುದರಿಂದ ನಮ್ಮ ಇಲಾಖೆಗೆ ಸ್ಪಷ್ಟ ನಿರ್ದೇಶನವನ್ನು ಇವತ್ತು ಕೊಟ್ಟಿದ್ದೇನೆ. ಯಾವ್ಯಾವ ಪ್ರದೇಶದಲ್ಲಿ ಈ ರೀತಿ ಅಂತರ್ಜಲ ಕೆಳಗೆ ಹೋಗುತ್ತಿದೆ, ಕಟ್ಟಡಗಳು, ಸೇತುವೆಗಳು ಏನು ಹಾನಿಯಾಗುವಂತಹ ವಿಚಾರ ಇದೆ, ಅದನ್ನು ತಕ್ಷಣ ಗಮನಿಸಿ ಬಂದ್ ಮಾಡಬೇಕೆಂದು ಹಾಗೂ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸ್ಪಷ್ಟ ನಿರ್ದೇಶನ ಕೊಟ್ಟಿದ್ದೇನೆ. ಇನ್ನು ಮಹೇಶಚಂದ್ ಅವರು ಒಂದು ಸರ್ಕಾರ ಆಜ್ಞೆ ಮಾಡಿ ಬ್ಯಾನ್ ಮಾಡಬೇಕೆಂದು ಕೇಳಿದರು. ಅವರಿಗೆ ಗೊತ್ತಿದೆ. ನಮ್ಮ ಕಚೇರಿಯಿಂದಲೇ ಅವರಿಗೆ ದಿನಾಂಕ 19.2.99ರಂದು ಬ್ಯಾನ್ ಮಾಡಿ ಆದರ ಆರ್ಡರ್ ಕೂಡ ತಹಸೀಲ್ದಾರ್ ಮುಖಾಂತರ ಕೊಟ್ಟಿದೆ. ಇವತ್ತು ಸ್ಪಷ್ಟವಾಗಿ ಶಿಂಷಾ ನದಿ ದಂಡೆ ಹತ್ತಿರ ಕೂಡ ಇದನ್ನು ಬ್ಯಾನ್ ಮಾಡುವ ಉದ್ದೇಶದಿಂದ ಸರ್ಕಾರ ಇವತ್ತು ಮಾಡಿದೆ. ಆದು ಆಗಿದೆ.

ಡಾ: ಎಂ. ಮಹೇಶ್‌ಚಂದ್ :— ಇಲ್ಲ, ಇವರು ಕೇವಲ ವೈದ್ಯನಾಥೇಶ್ವರ ದೇವಸ್ಥಾನದ ಬಳಿ ಸಂಬಂಧಪಟ್ಟ ಹಾಗೆ ಮಾತ್ರ ಆರ್ಡರ್ ಮಾಡಿರುವುದು.

ಶ್ರೀ ಎ.ಬಿ. ಪಾಟೀಲ್ :— ನಿಮಗೆ ಈ ನೋಟಿಫಿಕೇಷನ್ ಕೊಡುತ್ತೇನೆ. ಅದೇ ರೀತಿ ಯಾವುದೇ ಕ್ಷೇತ್ರದಲ್ಲಿ ಕೂಡ ಇವತ್ತು ಗ್ರಾಮೀಣಾಭಿವೃದ್ಧಿ ಸಚಿವರು ಹೇಳಿದ ಹಾಗೆ ಈಗಾಗಲೇ ಸರ್ಕಾರ ಇದರ ಬಗ್ಗೆ ವಿಚಾರ ಮಾಡಿದೆ. ಇಷ್ಟು ಆದಾಯವನ್ನು ಗ್ರಾಮಪಂಚಾಯಿತಿಗೆ ಕೊಟ್ಟು ಉಳಿದ ಆದಾಯವನ್ನು ನಮ್ಮ ಇಲಾಖೆಗೆ ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ಇನ್ನು ಕೆಲವೇ ದಿವಸದಲ್ಲಿ ಸ್ಪಷ್ಟ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಇದು ಎಲ್ಲಾ ಕಡೆ ನಡೆದಿದ್ದು ನಿಜ. ಒಪ್ಪಿಕೊಳ್ಳುತ್ತೇವೆ. ಅದಕ್ಕೆ ಸಮಗ್ರ ತಿದ್ದುಪಡಿ ತಂದು ಇದನ್ನು ಬದಲಾವಣೆ ಮಾಡುತ್ತೇವೆ ಎಂದು ಎಲ್ಲರಿಗೂ ತಿಳಿಸುತ್ತೇನೆ.

ಅಧ್ಯಕ್ಷರು :— ಈಗ ಪ್ರಶ್ನೋತ್ತರ ಮುಗಿಯಿತು, ಇನ್ನು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಮಂಜುನಾಥ ಸಿ. ಕುನ್ನೂರ :— ಸನ್ಮಾನ್ಯ ಅಧ್ಯಕ್ಷರೇ, ಸಕ್ಕರೆ ಕಾರ್ಖಾನೆ ಸಚಿವರು ಬಂದಿದ್ದಾರೆ, ನನ್ನ ಪ್ರಶ್ನೆ ಕೇಳುತ್ತೇನೆ.

ಶ್ರೀ ಹೆಚ್. ಶಿವಪ್ಪ :— ಮಾನ್ಯ ಅಧ್ಯಕ್ಷರೇ, ನಾನು ಸಭೆಗೆ ತಡವಾಗಿ ಬಂದೆ. ಕ್ಷಮಿಸಬೇಕು.

ಶಿಗ್ಗಾಂವ್ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭಿಸುವ ಬಗ್ಗೆ.

171(1283) ಶ್ರೀ ಕುನ್ನೂರು ಮಂಜುನಾಥ್ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇವೆ. ಅವುಗಳ ಲಾಭ-ನಷ್ಟ ಎಷ್ಟು;

ಆ) ಕರ್ನಾಟಕ ರಾಜ್ಯದಲ್ಲಿ ನೂತನವಾಗಿ ಎಷ್ಟು ಸಕ್ಕರೆ ಕಾರ್ಖಾನೆ ಲೈಸೆನ್ಸ್ ಪಡೆದಿದೆ ಅವುಗಳಲ್ಲಿ ಯಾವುವು ಪ್ರಾರಂಭವಾಗಿವೆ;

ಇ) ಶಿಗ್ಗಾಂವ್ ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ರಾಜ್ಯ ಸರ್ಕಾರದಲ್ಲಿ ನೋಂದಣಿಯಾಗಿದೆಯೇ;

ಈ) ಸದರಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸಲು ರಾಜ್ಯ ಸರ್ಕಾರ ಯಾವತ್ತೂ ಸೌಲಭ್ಯ ನೀಡಲಾಗುವುದೇ?